**ದಿಃ 08.08.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ :– ಮಾನ್ಯ ಸರ್ಕಾರಿ ಅಭಿಯೋಜಕರಿಂದ :–**

ಶವ ಇದ್ದ ಜಾಗವನ್ನು ಚಾಸಾ–1 ಅವರು ಪೊಲೀಸರಿಗೆ ತೋರಿಸಿದ್ದರು. ನಿಪಿ–2 ರ ಕಾಲದಲ್ಲಿ ನನ್ನ ಜೊತೆ ಚಾಸಾ–1 ಮತ್ತು ಚಾಸಾ–4 ಇದ್ದರು. ಚಾಸಾ–4 ಅವರು ಮೃತಪಟ್ಟು 1 ತಿಂಗಳು ಆಗಿದೆ. ನಿಪಿ–2 ರ ಕಾಲದಲ್ಲಿ ತೆಗೆದ ಪೋಟೋಗಳನ್ನು ಈಗಾಗಲೇ ನಿಪಿ–6 ರಿಂದ 11 ಎಂದು ಗುರುತಿಸಲಾಗಿದೆ. ನಿಪಿ–9 ರಿಂದ ನಿಪಿ–11 ಪೋಟೋಗಳಲ್ಲಿ ನಾನು, ಚಾಸಾ–1 ಮತ್ತು ಚಾಸಾ–4 ಇದ್ದೇವೆ. ಶವದ ಮೇಲೆ ಇದ್ದ ನೈಟಿಯನ್ನು ಈಗಾಗಲೇ ಎಂ.ಓ–8 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು :– ಆರೋಪಿ ಪರ ಶ್ರೀ ಆರ್.ಇ ವಕೀಲರಿಂದ :–**

ನಾನು ಕೂಲಿ ಕೆಲಸ ಮಾಡುತ್ತೇನೆ. ನನ್ನ ಜೊತೆ ಚಾಸಾ–4 ಮತ್ತು 6 ಕೂಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಚಾಸಾ–2 ಅವರು ನಮ್ಮ ಊರಿನವರು. ಚಾಸಾ–2 ಅವರಿಗೆ ಸೇರಿದ ಜಮೀನಿನ ಕೂಲಿ ಕೆಲಸಕ್ಕೆ ನಾನು, ಚಾಸಾ–4 ಮತ್ತು ಚಾಸಾ–6 ಹೋಗುತ್ತಿದ್ದೆವು ಎಂದರೆ ಸರಿ. ನಾನು ಈಗಲೂ ಚಾಸಾ–2 ಅವರ ಜಮೀನಿನಲ್ಲಿ ಕೆಲಸಕ್ಕೆ ಹೋಗುತ್ತಿದ್ದೇನೆ ಎಂದರೆ ಸರಿ. ಚಾಸಾ–4 ಮೃತಪಟ್ಟ ಕಾರಣ ಗೊತ್ತಿಲ್ಲ. ನಾನು ಮತ್ತು ಚಾಸಾ–4 ಮದ್ಯಪಾನ ಮಾಡುತ್ತಿದ್ದೆವು ಎಂದರೆ ಸರಿ. ಚಾಸಾ–2 ಅವರು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದರು ಎಂದರೆ ಸರಿ. ಚಾಸಾ–4 ಅವರು ವಿಪರೀತ ಮದ್ಯಪಾನ ಮಾಡಿ ಮೃತಪಟ್ಟಿದ್ದಾರೆ ಎಂದು ಗೊತ್ತಿಲ್ಲ. ಮೃತೆ ಭಾಗ್ಯಲಕ್ಷ್ಮೀ ಮತ್ತು ಚಾಸಾ–2 ಅವರ ನಡುವೆ ಅಕ್ರಮ ಸಂಬಂಧ ಇತ್ತು ಎಂದು ಗೊತ್ತಿಲ್ಲ. ಮೃತೆ ಭಾಗ್ಯಲಕ್ಷ್ಮೀ ಚಾಸಾ–2 ಅವರ ಮನೆಗೆ ಹೋಗುತ್ತಿದ್ದರು ಎಂದರೆ ಸರಿ. ಮೃತೆ ಭಾಗ್ಯಲಕ್ಷ್ಮೀ ಮತ್ತು ಚಾಸಾ–2 ಅವರ ನಡುವೆ ಅಕ್ರಮ ಸಂಬಂಧ ಇದ್ದ ಬಗ್ಗೆ ಊರಿನ ಜನರಿಗೆ ಗೊತ್ತಿತ್ತು ಎಂದರೆ ಗೊತ್ತಿಲ್ಲ. ನನಗೆ ಕೇವಲ ಸಹಿ ಮಾಡಲು ಮಾತ್ರ ಬರುತ್ತದೆ. ಓದಲು–ಬರೆಯಲು ಬರುವುದಿಲ್ಲ.

ನಿಪಿ–2 ರಲ್ಲಿ ನಿಪಿ–2(ಬಿ) ನಂತೆ ರಾತ್ರಿ 9.00 ರ ವೇಳೆಗೆ ಕಾಲುವೆ ಹತ್ತಿರ ಸಹಿ ಮಾಡಿದ್ದೇನೆ. ನಿಪಿ–2 ನ್ನು ಬರೆದ ಪೊಲೀಸ್ ವ್ಯಕ್ತಿಯ ಹೆಸರು ಗೊತ್ತಿಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಮಾತ್ರ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಪೊಲೀಸ್ ಠಾಣೆಯಲ್ಲಿ ಮತ್ತು ಕಾಲುವೆ ಹತ್ತಿರ ಸಹಿ ಮಾಡಿರುವುದಾಗಿ ನುಡಿಯುತ್ತಾರೆ. ಕಾಲುವೆಯ ಹತ್ತಿರ ಬೀದಿ ದೀಪ ಇಲ್ಲ. ನಿಪಿ–2 ರಲ್ಲಿ ನನ್ನ ಜೊತೆ ಬೇರೆ ವ್ಯಕ್ತಿ ಸಹಿ ಮಾಡಿಲ್ಲ. ನಿಪಿ–2 ರ ಕಾಲದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ಮತ್ತು ಸ್ಥಳದಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಎಂ.ಓ–1 ರಿಂದ 8 ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ–3 ರಿಂದ ನಿಪಿ–11 ಫೋಟೋಗಳನ್ನು ಸ್ಥಳದಲ್ಲಿ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ–2 ಅವರ ಹೇಳಿಕೆಯಂತೆ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ತೊಂದರೆ ಮಾಡಲು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:–ಇಲ್ಲ.**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಮೈಸೂರು.